ಶಾಲಾ ಕಾಲೇಜ್‌ಗಳ ಬಳಿ ಇರುವ ಮದ್ಯದಂಗಡಿಗಳ ಬಗ್ಗೆ

940 - ಶ್ರೀ ಎನ್. ಸುರೇಶ ಕುಮಾರ್ (ರಾಜಾಜಿನಗರ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಲಾ ಕಾಲೇಜುಗಳ ಬಳಿ ಇರುವ ಸಾರಾಯಿ ಅಂಗಡಿಗಳು, ಬಾರ್‌ಗಳು, ಮದ್ಯದಂಗಡಿಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಬೆಂಗಳೂರು ನಗರದಲ್ಲಿ ರಾಜಾಜಿನಗರ ಕ್ಷೇತ್ರಕ್ಕೆ ಸೇರಿರುವ ಪ್ರಕಾಶ್ ನಗರದಲ್ಲಿರುವ ವಿವೇಕವರ್ಧಿನಿ ಶಾಲೆಗೆ ತಗಲಿಕೊಂಡಂತೆ ಸಾರಾಯಿ ಅಂಗಡಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಸಾರಾಯಿ ಅಂಗಡಿಯಿಂದ ಪಾನಮತ್ತ ವ್ಯಕ್ತಿಗಳು ದಿನ ನಿತ್ಯ ಅಸಹ್ಯ, ಕೆಟ್ಟ ದೃಶ್ಯ ಕಲ್ಪಿಸಿ ಶಾಲಾ ವಿದ್ಯಾರ್ಥಿಗಳ (ಹೆಣ್ಣು ಮಕ್ಕಳೂ ಸೇರಿದಂತೆ) ಶೈಕ್ಷಣಿಕ ವಾತಾವರಣ ಕೆಡಿಸುತ್ತಿರುವುದನ್ನು ನಿಲ್ಲಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಮಂತ್ರಿಗಳು) :

ಅ) ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳು) ನಿಯಮಗಳು 1957ರ ನಿಯಮ 5ನ್ನು ಉಲ್ಲಂಘಿಸಿ ಶಾಲಾ ಕಾಲೇಜುಗಳ ಬಳಿ ಮದ್ಯದಂಗಡಿಗಳು ಇರುವುದಿಲ್ಲ.

ಆ) ಸದರಿ ಸಾರಾಯಿ ಅಂಗಡಿಯು ಶಾಲೆಯಿಂದ 100 ಮೀಟರ್‌ಗಿಂತ ಹೆಚ್ಚಿನ ಅಂತರದಲ್ಲಿದೆ. ಆದಕಾರಣ, ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5ನ್ನು ಆಕರ್ಷಿಸುವುದಿಲ್ಲ.

ಇ) ಜನರಲ್ಲಿ ಮದ್ಯ ಸೇವನೆಯ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಲು ಸರ್ಕಾರವು ಮದ್ಯಪಾನ ಸಂಯಮ ಮಂಡಳಿಯನ್ನು ರಚಿಸಿದೆ. ಶಾಲಾ ಕಾಲೇಜು ಬಳಿ ಶೈಕ್ಷಣಿಕ ವಾತಾವರಣವನ್ನು ಮದ್ಯಪಾನದಿಂದ ಕಲುಷಿತಗೊಳ್ಳದಂತೆ ಇರಲು ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5ನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು.

ಕುಂದಾಪುರದಲ್ಲಿ ಶ್ರೀ ವಸಂತಕುಮಾರ್ ಶೆಟ್ಟಿ ಎನ್ನುವರರ ಕೊಲೆ

ಶ್ರೀ ಪ್ರತಾಪ ಚಂದ್ರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಗಳಲ್ಲಿ ಇತ್ತೀಚೆಗೆ 30ನೇ ತಾರೀಖು ರಾತ್ರಿ ಒಂದು ರಾಜಕೀಯ ಕೊಲೆ ನಡೆಯಿತು. ಈ ಕೊಲೆಯನ್ನು ನಾನು ರಾಜಕೀಯ ಕೊಲೆ ಎನ್ನತಕ್ಕಂಥ ಆಪಾದನೆಯನ್ನು ಏಕೆ ಮಾಡುತ್ತಿದ್ದೇನೆ ಎಂದರೆ, ಕುಂದಾಪುರ ಕ್ಷೇತ್ರದಲ್ಲಿ ವಸಂತ ಕುಮಾರ್ ಶೆಟ್ಟಿ ಎನ್ನತಕ್ಕಂಥವರು ಸಿ.ಪಿ.ಎಡ್. ತರಬೇತಿಯನ್ನು ಮುಗಿಸಿ ನೌಕರಿ ಇಲ್ಲದೆ ಕೃಷಿಯನ್ನು ಮಾಡತಕ್ಕಂಥ ಒಬ್ಬ ಆದರ್ಶ ಯುವಕ. ಅವರು ಅಕ್ರಮದ ವಿರುದ್ಧ ಹೋರಾಟ ಮಾಡತಕ್ಕಂಥ ಒಬ್ಬ ಆದರ್ಶ ಯುವಕ. ನಮ್ಮ ಪಕ್ಷದ ಯುವ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಅವರು ಆ ಪರಿಸರದ, ಬಡವರ ಪ್ರೀತಿ, ವಿಶ್ವಾಸವನ್ನು ಗಳಿಸಿರತಕ್ಕಂಥ ಯುವಕರು. ತನ್ನ ಮೇಲೆ ಈ ಒಂದು ಕೊಲೆಯ ಸಂಚು ನಡೆಯುತ್ತಿದೆ ಎನ್ನತಕ್ಕಂಥ ಸುಳಿವು ದೊರೆತ ತಕ್ಷಣ ಜುಲೈ ತಿಂಗಳಲ್ಲಿ ಅಂದರೆ 1994ರ ಜುಲೈನಲ್ಲಿರ ಕುಂದಾಪುರದ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿಗೆ ಹೋಗಿ ದೂರನ್ನು ಕೊಟ್ಟರು ಮತ್ತು ದೂರನ್ನು ಕೊಟ್ಟ ಬಗ್ಗೆ ರಶೀದಿಯನ್ನು ಪಡೆದುಕೊಂಡು ಬಂದಿರುತ್ತಾರೆ. ಜುಲೈ ತಿಂಗಳಲ್ಲಿ

ಕೊಟ್ಟಂಥ ದೂರು ಆಗಸ್ಟ್ ತಿಂಗಳಲ್ಲಿ ಕುಂದಾಪುರದ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿಯಿಂದ ಶಂಕರನಾರಾಯಣ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ರವರು, ಯಾರ ಮೇಲೆ ಇವರು ತಪಾಸಣೆಯನ್ನು ಮಾಡಿದ್ದಾರೆ, ಮತ್ತು ಈ ವಸಂತ ಕುಮಾರ್ ಶೆಟ್ಟಿ ಈ ಮೂರೂ ಜನರಿಗೆ ನೋಟೀಸ್‌ನ್ನು ಜಾರಿ ಮಾಡಿರುತ್ತಾರೆ. ಈ ನೋಟೀಸನ್ನು ಮಾಡುವಂಥ ಸಂದರ್ಭದಲ್ಲಿ ವಸಂತ ಕುಮಾರ್ ಶೆಟ್ಟಿ ಮತ್ತು ಅವರ ಮಿತ್ರರಾಗಿರತಕ್ಕಂಥ ವಿಠ್ಠಲ್ ಸಾಹೇಬ್ ಮತ್ತು ಶ್ರೀಧರ ಶೆಟ್ಟಿ ಎನ್ನತಕ್ಕವರು ಪೋಲೀಸ್ ಠಾಣೆಗೆ ಹೋಗಿರುತ್ತಾರೆ. ಅದರೆ ಯಾರ ಮೇಲೆ ಅವರು ಆರೋಪವನ್ನು, ಕೊಲೆಯ ಸಂಚನ್ನು ಮಾಡಿದ್ದಾರೆ. ಆ ವ್ಯಕ್ತಿಯನ್ನು ಪೋಲಿಸ್ ಠಾಣೆಗೆ ಕರೆಸುವಲ್ಲಿ ಪೋಲೀಸರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಸುಮಾರು ಒಂದು ಗಂಟೆಗಳ ಕಾಲಕಾದರೂ ಸಹ ಅವರನ್ನು ಕರೆಸಲಿಕ್ಕೆ ಪೋಲೀಸರಿಗೆ ಆಗಲಿಲ್ಲಿ. ನಂತರ ಅವರು ವಾಪಸ್ಸು ಬಂದರು. ಇದಾದ ನಂತರ ವಿಧಾನಸಭಾ ಚುನಾವಣೆ ನಡೆಯಿತು. ಈ ವಿಧಾನಸಭಾ ಚುನಾವಣೆ ನಡೆದ ನಂತರ ಅಂದರೆ ಜನವರಿಯಲ್ಲಿ ಎರಡನೇ ಬಾರಿ ಈ ಕುಮಾರ ಶೆಟ್ಟಿ ಎನ್ನತಕ್ಕಂಥವರು ಶಂಕರನಾರಾಯಣ ಠಾಣೆಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ಹೇಳುತ್ತಾರೆ. ಇದು ಎಲ್ಲಾ ಸುಳ್ಳು ಈ ರೀತಿಯ ಕಂಪ್ಲೇಂಟನ್ನು ತರಬೇಡಿ. ಈ ರೀತಿ ಮಾಡಿದರೆ ನಾನು ಒಪ್ಪುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಈ ವಿಚಾರವನ್ನು ಆ ಯುವಕರು ನನ್ನ ಹತ್ತಿರ ಬಂದು ಹೇಳಿದರು. ಆದರೆ ನನ್ನ ಬಳಿ ಈಗಾಗಲೇ ದೂರು ಕೊಟ್ಟಿದತಕ್ಕಂಥ ದಾಖಲಾತಿಗಳು ಇರುವ ಆಧಾರದಿಂದ ಈ ಬಗ್ಗೆ ನಾನು ಹೆಚ್ಚು ರಾಜಕೀಯ ಮಾಡುವುದಕ್ಕೆ ಹೋಗಲಿಲ್ಲಿ. ಅದರೆ 30ನೇ ತಾರೀಖು ಆ ಯುವಕನ ಕೊಲೆ ಆಯಿತು. ಆ ಕೊಲೆಯಾದಂಥ ಸನ್ನಿವೇಶದ ದಿವಸ ಊರಿನ ಹಬ್ಬ. ಹಬ್ಬದ ದಿನ ರಾತ್ರಿ ದೇವಸ್ಥಾನಕ್ಕೆ ಹೋಗಿ ಕೈಮುಗಿದು ಬರತಕ್ಕಂಥ ಸಂದರ್ಭದಲ್ಲಿ ಕೊಲೆ ಆಯಿತು. ಕೊಲೆ ಆದಾಗ, ಪೋಲಿಸರು ಮಹಜರು ಮಾಡಿದ ಸಂದರ್ಭದಲ್ಲಿ ಅವರ ಹತ್ತಿರ ಇದ್ದಂತ ಕೆಲವು ದಾಖಲೆಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ, ಅವರ ಕಿಸೆಯಲ್ಲಿ ಯಾರ ಮೇಲೆ ಕೊಲೆಯ ಸಂಚಿನ ಆರೋಪವನ್ನು ಮಾಡಿದ್ದರು, ನನ್ನ ಮೇಲೆ ಕೊಲೆಯ ಸಂಚು ಆಗುತ್ತಿದೆ ಎನ್ನತಕ್ಕಂಥ ದೂರಿನ ನಕಲು ಮತ್ತು ಪೋಲೀಸ್ ರಶೀದಿ, ಗ್ರಾಮದಲ್ಲಿ ಪಾನ ನಿಷೇಧವನ್ನು ಮಾಡಬೇಕು ಅನ್ನತಕ್ಕಂಥ ಸಾರ್ವಜನಿಕ ಮನವಿಗೆ ರುಜು ಪಡೆದಿರತಕ್ಕ ಹಾಗೂ ಶಾಸಕರಿಗೆ ಬರೆದಿರುವ ಮನವಿ ಪತ್ರಗಳು ಆ ಕೊಲೆಯಾದಂಥ ಸ್ಥಳದಲ್ಲಿ ಸಿಕ್ಕಿವೆ. ಇದರ ಅರ್ಥ ಏನಾಗುತ್ತದೆ ಎಂದರೆ ಈ ಒಂದು ಸಂದರ್ಭದಲ್ಲಿ ಸಹಾ ಅವರಿಗೆ ರಕ್ಷಣೆಯನ್ನು ಕೊಡಲಿಕ್ಕೆ ಸಂಪೂರ್ಣವಾಗಿ ಪೋಲೀಸರು ವಿಫಲರಾಗಿದ್ದಾರೆ ಮತ್ತು ಈ ಸಂದರ್ಭದಲ್ಲಿ ಈ ಕೊಲೆಗೆ ಪೋಲೀಸರ ನಿಷ್ಕ್ರಿಯತೆಯೇ ಕಾರಣ ಎಂದು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಇದು ಹಬ್ಬದ ದಿವಸ ಕೊಲೆಯಾಗಿದೆ. ಕೊಲೆಯನ್ನು ಪ್ರತ್ಯಕ್ಷವಾಗಿ ಕಂಡಂಥ ಸಾಕ್ಷಗಳು ಇದ್ದಾರೆ. ಆದರೆ ಯಾವ ಸಾಕ್ಷಗಳೂ ಮುಂದೆ ಬರುತ್ತಿಲ್ಲ. ಏಕೆಂದರೆ, ರಕ್ಷಣೆ-ಕೇಳಿ ನಾವು ಪೋಲೀಸರಿಗೆ ದೂರು ಕೊಟ್ಟಿವೆ ಆ ದೂರನ್ನು ತನಿಖೆ ಮಾಡದೆ ಇರುವುದರಿಂದ ಕೊಲೆಯಾದಂಥ ಯುವಕನ ಬಗ್ಗೆ ಯಾರೂ ಸಾಕ್ಷಿ ಹೇಳಲು ಮುಂದೆ ಬರುತ್ತಿಲ್ಲ. ಇದರ ಬಗ್ಗೆ ತನಿಖೆಯನ್ನು ಮಾಡಿ ತಪ್ಪಿತಸ್ಥರನ್ನು ಹುಡುಕುವುದಕ್ಕೆ ಪ್ರಾಮಿಣಿಕವಾದ ಪ್ರಯತ್ನವನ್ನು ಪೋಲೀಸರು ಮಾಡಿಲ್ಲ. ಬಹುಶ: ಆ ತಾರೀಖಿನಿಂದ ಇಲ್ಲಿಯವರೆಗೆ ಆ ಸ್ಥಳಕ್ಕೆ ಪೋಲೀಸನವರು ಪ್ರತ್ಯಕ್ಷ ಸಾಕ್ಷಿಗಳನ್ನು ವಿಚಾರಣೆ ಮಾಡಲಿಕ್ಕೆ ಹೋಗಿಲ್ಲ ಮತ್ತು ಇದು ರಾಜಕೀಯ ಪ್ರೇರಿತ ಕೊಲೆ ಎನ್ನತಕ್ಕ ಆಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಈ ಕೊಲೆಯ ಹಿಂದೆ ಇರತಕ್ಕಂಥ ಸಾಕ್ಷಿಗಳು ಭಾರತೀಯ ಜನತಾ ಪಕ್ಷದವರು. ಅವರು ಈ ಕೊಲೆಯ ಹಿಂದಿರತಕ್ಕ ಬೊಂಬಾಯಿ ಗೂಂಡಾಗಳ, ಭೂಗತ ದೂರುಗಳ ಸಂಪರ್ಕವನ್ನು ಹೊಂದಿರತಕ್ಕಂಥ ವಿಚಾರವನ್ನು ತಿಳಿದು, ಈ

ಹುಡುಗ ಈ ಒಂದು ದೂರನ್ನು ಸಲ್ಲಿಸಿದರು. ಆ ಯುವಕನನ್ನು ಕೊಲೆ ಮಾಡಿದಂಥವರು ತಾಲ್ಲೂಕು ಪಂಚಾಯಿತಿಯಲ್ಲಿ ಸೋತಂತ ಅಭ್ಯರ್ಥಿಗಳು ಮತ್ತು ಅವನ ಸೋದರ, ಹಾಲಾಡಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಅವರು ಸೋದರಿ ಈ ಒಂದು ಕೊಲೆಯಲ್ಲಿ ನೇರವಾಗಿ ಭಾಗವಹಿಸಿದ್ದಾರೆ. ಈ ವಿಚಾರವನ್ನು ನೀವು ತನಿಖೆ ಮಾಡಬೇಕು. ಇದರಲ್ಲಿ ನ್ಯಾಯ ಒದಗಿಸಬೇಕು. ಇದನ್ನು ಸಿ.ಬಿ.ಐ.ಗೆ ವಹಿಸಬೇಕು ಎನ್ನುವುದು ನನ್ನ ಕಳಕಳಿಯ ಮನವಿ, ಏಕೆಂದರೆ, ಇದರಲ್ಲಿ ಬಹಳಷ್ಟು ...

ಅಧ್ಯಕ್ಷರು : ಸಾಕಷ್ಟು ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಕೆ. ಜಯರಾಮಶೆಟ್ಟಿ : ಬಿ.ಜೆ.ಪಿ.ಯವರ ಹೆಸರನ್ನು ಅವರು ತರುತ್ತಿದ್ದಾರೆ.

(ಗೊಂದಲ)

ಯಾವುದೇ ಕಾರಣಕ್ಕೂ ಪಕ್ಷದ ಹೆಸರನ್ನು ಅದು ಕಾಂಗ್ರೆಸ್ ಆಗಿರಲಿ, ಮತ್ಯಾವುದೇ ಆಗಿರಲಿ, ಅದರ ಹೆಸರನ್ನು ಹೇಳುತ್ತಿರುವುದಕ್ಕೆ ನಮ್ಮ ಆಕ್ಷೇಪ ಇದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಜಯರಾಮ ಶೆಟ್ಟರೇ. ತಾವು ಸಾಕಷ್ಟು ಪ್ರಸ್ತಾಪ ಮಾಡೀದ್ದೀರಿ. ಮಂತ್ರಿಗಳು ಉತ್ತರ ಹೇಳಲಿ. ಸಿ.ಬಿ.ಐ. ಎನ್‌ಕ್ವೈರಿ ಬೇಡ. ಇವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಂದಲೇ ಎನಕ್ವೈರಿ ಮಾಡಿಸೋಣ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಕೊಲೆ ಸಂಚನ್ನು ಬಿಡಿಸಲಿಕ್ಕೆ ರಾಜಕೀಯ ಒತ್ತಡ ಬರುತ್ತದೆ. ಕೊಲೆಗೆ ಬಳಸಲಾದಂಥ ಆಯುಧಗಳನ್ನು ವಶಪಡಿಸಿಕೊಂಡಿಲ್ಲ, ಕೊಲೆ ಮಾಡುವ ಸಂಚು ಇದೆ ಎಂದು ಯಾರ ಮೇಲೆ ದೂರನ್ನು ಕೊಟ್ಟಿದ್ದಾರೆ ಅವರನ್ನು ಹಿಡಿದಿಲ್ಲ ಮತ್ತು ಯಾರು ಅವರಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ...

(ಗೊಂದಲ)

ಅಧ್ಯಕ್ಷರು : ನೀವು ಸುಮ್ಮಸುಮ್ಮನೆ ಎದ್ದು ನಿಂತುಕೊಂಡರೆ ಅದನ್ನೇ ನಿಜ ಅಂದುಕೊಳ್ಳುತ್ತಾರೆ, ನೀವು ಏಕೆ ಎದ್ದು ನಿಂತುಕೊಳ್ಳುತ್ತೀರಿ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಯಾರು ಅಪರಾಧಿಗಳಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ ಅವರನ್ನು ಹಿಡಿದಿಲ್ಲ, ಯಾರು ಆರ್ಥಿಕ ಸಹಾಯವನ್ನು ಮಾಡುತ್ತಿದ್ದಾರೆ ಅವರನ್ನು ಹಿಡಿದು ಶಿಕ್ಷಿಸಿದರೆ ಮಾತ್ರ ಇಂಥ ರಾಜಕೀಯ ಕೊಲೆಗಳು ನಿಲ್ಲುತ್ತವೆ.

ಅಧ್ಯಕ್ಷರು : ಇದರಲ್ಲಿ ಇರತಕ್ಕದ್ದು ಎರಡೇ ಅಂಶ, ಉಳಿದುದಕ್ಕೆಲ್ಲ ಹೋಗಬೇಕಾಗಿಲ್ಲ ಪೋಲೀಸ್ ನಿಷ್ಕ್ರಿಯತೆ ಎಂದು ಒಂದನ್ನು ಹೇಳಿದ್ದಾರರೆ, ರಾಜಕೀಯವಾದ ಕೈವಾಡ ಇದೆ ಎಂದು ಇನ್ನೊಂದನ್ನ ಹೇಳಿದ್ದಾರೆ. ಇದರ ಬಗ್ಗೆ ಸಂಪೂರ್ಣವಾದ ತನಿಖೆಯನ್ನು ನಡೆಸುವ ಜವಾಬ್ದಾರಿಯನ್ನು ತಾವು ಹೊತ್ತು ಕೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಅಪ್ಪಣೆ ಕೊಡುವುದಾದರೆ ಒಂದು ಹೇಳಿಕೆಯನ್ನು ಕೊಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕು ಬೆಳ್ವೆ ಗ್ರಾಮದ ಹೊನಕೆರೆ ಎಂಬಲ್ಲಿ ದಿನಾಂಕ: 30-30-95ರ ರಾತ್ರಿ ಸುಮಾರು 34 ವರ್ಷದ ವಯಸ್ಸಿನ ಶ್ರೀ ವಸಂತ ಕುಮಾರ ಶೆಟ್ಟಿ ತಂದೆ ಮಹಾಬಲ ಶೆಟ್ಟಿ ಎಂಬಾತನು ಕೊಲೆಯಾಗಿದ್ದು, ಈ ಸಂಬಂಧ, ಶ್ರೀ ಮಹಾಬಲ ಶೆಟ್ಟಿ (ಮೃತರ ತಂದೆ) ಇವರು ಶಂಕರನಾರಾಯಣ ಪೋಲೀಸ್ ಠಾಣೆಯಲ್ಲಿ ದಿನಾಂಕ: 31-3-95ರಂದು

ಬೆಳಿಗ್ಗೆ 10.30 ಗಂಟೆಗೆ ನೀಡಿದ ಹೇಳಿಕೆಯ ಮೇರೆಗೆ, ಅಪರಾಧ ಸಂಖ್ಯೆ: 46 :95 ಕಲಂ 147-148-302 ಜೊತೆಗೆ 149 ಐಪಿಸಿ ರೀತ್ಯಾ ಪ್ರಕರಣವು ದಾಖಲಾಗಿರುತ್ತದೆ.

ದಿನಾಂಕ: 26-7-94ರಂದು ವಸಂತಕುಮಾರ ಶೆಟ್ಟಿ(ಮೃತರು) ಕುಂದಾಪುರ ಪೋಲೀಸ್ ವೃತ್ತ ನಿರೀಕ್ಷಕರಿಗೆ ಅರ್ಜಿಯೊಂದನ್ನು ಸಲ್ಲಿಸಿ ಅದರಲ್ಲಿ ತಮಗೆ ಮತ್ತು ತಮ್ಮ ಕಡೆಯವರಿಗೆ ಈ ಹಿಂದೆ ಒಂದು ಮೊಕದ್ದಮೆಯಲ್ಲಿ ಮಂಗಳೂರು ನ್ಯಾಯಾಲಯಕ್ಕೆ ಹಾಜರಾಗಲು ಹೋಗುವಾಗ ಅದೇ ಗ್ರಾಮದ ಶ್ರೀ ವೈ.ವಸಂತಕುಮಾರ ಶೆಟ್ಟಿ ಹಾಗೂ ಆತನ ಕಡೆಯವರು ತಡೆಗಟ್ಟಿ ಕೋಲಿನಿಂದ ಹೊಡೆದು ಕೊಲೆ ಮಾಡಲು ಸಂಚು ಮಾಡಿರುವುದಾಗಿ ತಿಳಿಸಿದ್ದರು. ಮತ್ತು ಅವರಿಗೆ ರಕ್ಷಣೆ ಕೋರಿ ಅರ್ಜಿಯನ್ನು ನಿಲ್ಲಿಸಿದ್ದರ ಮೇರೆಗೆ, ವೃತ್ತ ನಿರೀಕ್ಷಕರು ಸಾಮಾನ್ಯ ಅರ್ಜಿ ಸಂಖ್ಯೆ : 87:94ರಲ್ಲಿ ದಾಖಲು ಮಾಡಿಕೊಂಡು ಅದೇ ದಿನ ಅಂದರೆ 26-7-94 ರಂದು ಶಂಕರನಾರಾಯಣ ಪೋಲೀಸ್ ಠಾಣೆಯ ಉಪ ನೀರೀಕ್ಷಕರು ಉಭಯರಿಗೂ ಪೋಲೀಸ್ ನೋಟೀಸ್ ಕಳುಹಿಸಿ ದಿನಾಂಕ 2-8-94ರಂದು ಠಾಣೆಯಲ್ಲಿ ಹಾಜರಾಗಲು ತಿಳುವಳಿಕೆ ಕೊಟ್ಟಿರುತ್ತಾರೆ. ಅದರೆ ಎದುರು ಅರ್ಜಿದಾರರ ಠಾಣೆಗೆ ಹಾಜರಾಗದೇ ಇದ್ದುದರಿಂದ ಪಿಎಸ್ಐ ಅವರು ಗ್ರಾಮಕ್ಕೆ ಭೇಟಿ ನೀಡಿ ಎದುರು ಅರ್ಜಿದಾರರ ವೈ. ವಸಂತಕುಮಾರ್ ಶೆಟ್ಟಿ ಅವರ ತಂದೆಯ ಹೇಳಿಕೆಯನ್ನು ಪಡೆದು ಅದೇ ದಿನ ಅರ್ಜಿದಾರರಿಗೆ ಹಿಂಬರಹವನ್ನು ಕೊಟ್ಟಿರುತ್ತಾರೆ. ಈ ಗ್ರಾಮಕ್ಕೆ ವಿಶೇಷವಾಗಿ ಪೋಲೀಸ್ ಪಸ್ತನ್ನು ಸಹ ನಿರ್ಪಡಿಸಲಾಗಿದೆ. ಹಾಲಿ ನಡೆದ ವಿಧಾನ ಸಭಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಸಂಬಂಧ ಹೆಚ್ಚಿನ ಪೋಲೀಸ್ ಬಂದೋ ಬಸ್ತು ನಿರ್ಪಡಿಸಿದ್ದರಿಂದ ಯಾವುದೇ ಅಹಿತಕರ ಘಟನೆಗಳು ನಡೆದಿರುವುದಿಲ್ಲ. ಇತ್ತೀಚೆಗೆ ಮೃತ ವಸಂತಕುಮಾರ್ ಶೆಟ್ಟಿ ಯವರಾಗಲೀ, ಅವರ ಕಡೆಯವರಾಗಲೀ ತನಗೆ ರಕ್ಷಣೆಯನ್ನು ಕೋರಿ ಯಾವ ಅರ್ಜಿಯನ್ನು ಪೋಲೀಸರಿಗೆ ನೀಡಿರುವುದಿಲ್ಲ.

ಮೃತ ವಸಂತಕುಮಾರಶೆಟ್ಟಿ ಅಲ್ಬಡಿ ಗ್ರಾಮದಲ್ಲಿ ಬಹ್ಮ ಬೈದರ್ಕಳ ನೇಮೋತ್ಸವಕ್ಕೆ ಹೋಗಿ ತನ್ನ ಮೋಟಾರ್ ಸೈಕಸ್ ಸಂ.ಕೆಎ-20 ಹೆಚ್ 972 ರಲ್ಲಿ ಬರುತ್ತಿರುವಾಗ ಹೊನಕೆರೆ ಜಂಕ್ಷನನಲ್ಲಿ ತಲೆಗೆ ಗಾಯವಾಗಿ ಮೃತಪಟ್ಟಿರುತ್ತಾರೆ. ಮೃತ ವಸಂತಕುಮಾರ ಶೆಟ್ಟಿ ಮತ್ತು ಅದೇ ಗ್ರಾಮದವರಾದ ಶ್ರೀ ವೈ. ವಸಂತಕುಮಾರಶೆಟ್ಟಿ, ರಾಜು ಪೂಜಾರಿ ಹಾಗೂ ಆತನ ತಮ್ಮ ಉದಯಪೂಜಾರಿ ಇವರ ನಡುವೆ 1988ನೇ ಇಸವಿಯಲ್ಲಿ ಗಲಾಟೆಯಾಗಿ ಮೊಕದ್ದಮೆ ದಾಖಲಾಗಿದ್ದರಿಂದ ಮೃತ ವಸಂತಕುಮಾರ ಶೆಟ್ಟಿಯ ಸಾವಿಗೆ ಹಳೆಯ ವೈಷಮ್ಯವೇ ಕಾರಣ ಎಂದು ಕಂಡು ಬರುತ್ತದೆ. ಈ ಮೊಕದ್ದಮೆಯು ಮಂಗಳೂರು ಸೆಶನ್ಸ್ ನ್ಯಾಯಾಲಯದಲ್ಲಿ ಖುಲಾಸೆ ಆಗಿರುತ್ತದೆ. ಆ ದಿನ ಅಮಾವಾಸ್ಯೆ ರಾತ್ರಿಯಾಗಿದ್ದು, ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದಲ್ಲಿ ಮನೆಗಳು ಇರುವುದಿಲ್ಲ, ತನಿಖೆ ಕಾಲದಲ್ಲಿ ಈವರೆವಿಗೆ ಪ್ರತ್ಯಕ್ಷ ಸಾಕ್ಷಿಗಳು ಸಿಕ್ಕಿರುವುದಿಲ್ಲ. ಮೃತನಿಗೆ ಹರಿತವಾದ ಆಯುಧಗಳಿಂದ ಕುತ್ತಿಗೆಯ ಮೇಲ್ಗಡೆ ತಲೆಯ ಮೇಲೆ ಹೊಡೆದ ಗಾಯಗಳು ಇರುತ್ತವೆ. ತನಿಖೆಯ ಕಾಲದಲ್ಲಿ ಮೃತನ ಜೇಬಿನಲ್ಲಿ ಈ ಹಿಂದೆ ಅವರು ಪೋಲೀಸರಿಗೆ ನೀಡಿದ ದೂರಿನ ನಕಲು, ಪೋಲೀಸರಿಂದ ಪಡೆದ ಸ್ವೀಕೃತಿ, ಪೋಲೀಸರು ಮತ್ತು ಪಾನ ನಿಷೇಧ ಜಾರಿಗೆ ತರುವಂತೆ ಶಾಸಕರಿಗೆ ನೀಡಲು ಇಟ್ಟಿದ್ದ ಮನವಿ ಪತ್ರದ ಪ್ರತಿಗಳು ಸಿಕ್ಕಿದ್ದು, ಪೋಲಿಸರು ಅವುಗಳನ್ನು ವಶಪಡಿಸಿಕೊಂಡು ನಮೂದು ಮಾಡಿರುತ್ತಾರೆ.

ಈ ಕೊಲೆಯ ವರ್ತಮಾನ ಸಿಕ್ಕಿದ ಕೂಡಲೇ ಶಂಕರನಾರಾಯಣ ಪೋಲೀಸ್ ಠಾಣೆಯ ಪಿ.ಎಸ್.ಐ. ಕುಂದಾಪುರ ವೃತ್ತ ನಿರೀಕ್ಷಕರು ಮತ್ತು ಉಡುಪಿ ಎ.ಎಸ್.ಐ.

ಅವರು ಸ್ಥಳಕ್ಕೆ ಬೇಟಿ ನೀಡಿ ಕ್ರಮ ಜರುಗಿಸಿರುತ್ತಾರೆ. ಈ ಪ್ರಕರಣಗಳ ತನಿಖೆಯನ್ನು ಕುಂದಾಪುರ ವೃತ್ತ ನಿರೀಕ್ಷಕರು ನಡೆಸುತ್ತಿರುತ್ತಾರೆ. ಆರೋಪಿಗಳ ಪತ್ತೆಗಾಗಿ ವಿಶೇಷ ದಳವನ್ನು ರಚಿಸಿ, ಪತ್ತೆ ಕಾರ್ಯವನ್ನು ಕ್ಷಿಪ್ರಗತಿಯಲ್ಲಿ ಮುಂದುವರೆಸಿರುತ್ತಾರೆ. ಈ ಪ್ರಕರಣದ ತನಿಖೆಯನ್ನು ಆಧ್ಯತೆಯ ಮೇರೆಗೆ ನಡೆಸುತ್ತಿದ್ದು, ಎಲ್ಲಾ ಆರೋಪಿಗಳನ್ನು ಪತ್ತೆ ಹಚ್ಚಲು ಸರ್ವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಈ ಕೊಲೆಗೆ ಹಳೆಯ ದ್ವೇಷ ಮತ್ತು ವೈಷಮ್ಯವೇ ಕಾರಣವಾಗಿರುತ್ತದೆ. ಬೆಳ್ಳೆ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಪೋಲೀಸ್ ಬಂದೋಬಸ್ತ್ ವಿಧಿಸಲಾಗಿದೆ.

ಮಾನ್ಯ ಅಧ್ಯಕ್ಷರೇ, ಇದೂ ಅಲ್ಲದೆ, ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರು ಕೇಂದ್ರ ಸರ್ಕಾರದ ಸಿ.ಬಿ.ಐ.ಗೆ ಈ ಕೊಲೆ ಪ್ರಕರಣವನ್ನು ತನಿಖೆಗೆ ಕೊಡಬೇಕು ಅವರ ಮುಖಾಂತರ ವಿಚಾರಣೆ ಆಗಬೇಕು ಎನ್ನುವಂಥದ್ದನ್ನು ಒತ್ತಾಯ ಮಾಡಿದ್ದಾರೆ. ನಾನು ಅವರಿಗೆ ಭರವಸೆ ಕೊಡುತ್ತೇನೆ ನಾನು ಯಾರ ಮೇಲೂ ರೋಷ ದೊಡ್ಡವರಾಗಿರಲಿ, ಯಾವುದೇ ಪಕ್ಷದವರಾಗಲಿ, ಅವರನ್ನು ವಿಚಾರಣೆ ಮಾಡಿ ತಪ್ಪು ಮಾಡಿದ್ದಾರೆ ಎಂದು ಕಂಡು ಬಂದರೆ ಅವರಿಗೆ ಶಿಕ್ಷೆ ಮಾಡುವುದು ಸರ್ಕಾರದ ಕರ್ತವ್ಯವಾಗುತ್ತದೆ. ಈ ಕರ್ತವ್ಯದಲ್ಲಿ ನಾವು ಹಿಂದೆ ಬೀಳುವುದಿಲ್ಲ. ಅವರು ರಕ್ಷಣೆಯನ್ನು ಕೇಳಿಲ್ಲ, ಆದರೆ ಒಂದು ಭರವಸೆಯನ್ನು ಕೊಡುತ್ತೇನೆ, ಮೇಲ್ನೋಟಕ್ಕೆ ಇದು ಎರಡು ಗುಂಪಿನ ಮಧ್ಯೆ ಇರತಕ್ಕಂತಹ ದ್ವೇಷದಿಂದ ಆಗಿರತಕ್ಕಂಥದ್ದು. ಸಾಕ್ಷಿ ಹೇಳಲು ಯಾರೂ ಸಹಿತ ಮುಂದೆ ಬರುತ್ತಿಲ್ಲ. ಅವರು ನಮ್ಮ ಮೇಲೆ ವಿಶ್ವಾಸ ಇಡಲಿ. ನಾನು ಇದರ ಬಗ್ಗೆ ಖುದ್ದಾಗಿ ಉನ್ನತ ಪೋಲೀಸ್ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಸಿ.ಐ.ಡಿ.ಗೆ ಕೊಡಬೇಕೋ ಅಥವಾ ಸಿ.ಬಿ.ಐ.ಗೆ ಕೊಡಬೇಕೋ ಎನ್ನುವುದನ್ನು ಪರಿಶೀಲನೆ ಮಾಡಿ ಒಂದು ನಿರ್ಧಾರಕ್ಕೆ ಬರುತ್ತೇನೆ.

ಮುರದ್-ಸರ್ವೋದಯ ಶಿಕ್ಷಣ ಟ್ರಸ್ಟಿನ ಡಿಯಲ್ಲಿ ನಡೆಯುತ್ತಿರುವ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಂದನೆ.

ಶ್ರೀ ಅಂಬಡಗಟ್ಟಿ ಎಸ್. ರುದ್ರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಅಂದರೆ 3ನೇ ಏಪ್ರಿಲ್ 1995ರಂದು ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಯುತ್ತಾ ಇದೆ. ಧಾರವಾಡದ ತಾಲ್ಲೂಕಿನ ಮುರದ್ ಎಂಬ ಗ್ರಾಮದಲ್ಲಿ ಸರ್ವೋದಯ ಶಿಕ್ಷಣ ಟ್ರಸ್ಟ್ ಎಂದು ನಡೆಯುತ್ತಿರುವ ಪ್ರೌಢಶಾಲೆಯಲ್ಲಿ 16 ಜನ ವಿದ್ಯಾರ್ಥಿಗಳು ಫೀ ಕಟ್ಟಿ ಫಾರಂ ತುಂಬಿದ್ದರೂ ಕೂಡ ಆ ಶಾಲೆಯ ಸಿಬ್ಬಂದಿ ವರ್ಗದ ತಪ್ಪಿನಿಂದಾಗಿ ಅವರು ಪರೀಕ್ಷೆಗೆ ಕೂರಲಿಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಬಂದಿದೆ. ನಿನ್ನೆ ನಾನು ಫೋನ್ ಮುಖಾಂತರ ಸಂಸ್ಥೆಯ ಮುಖ್ಯಸ್ಥರನ್ನು ಸಂಪರ್ಕ ಮಾಡಿದ್ದೆ. ಆದಕ್ಕೆ ಅವರು ಸಿಬ್ಬಂದಿ ತಪ್ಪಿನಿಂದಾಗಿ ಫೀಯನ್ನು ಪ್ರೌಢ ಶಿಕ್ಷಣ ಪರೀಕ್ಷಾ ಸಂಸ್ಥೆಗೆ ಕಟ್ಟಲಾಗಲಿಲ್ಲ. ಆ ಕಾರಣಕ್ಕಾಗಿ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಕುಳಿತುಕೊಳ್ಳವ ಅವಕಾಶದಿಂದ ವಂಚಿತರಾಗಿರುವುದು ನಿಜ ಎಂದು ಅವರು ಒಪ್ಪಿಕೊಂಡಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುವುದು ಇಷ್ಟೆ. ಈ ತಪ್ಪಿಗೆ ಯಾರು ಹೊಣೆಗಾರರೋ ಅವರಿಗೆ ಶಿಕ್ಷೆಯಾಗಬೇಕು ಮತ್ತು ಆ 16 ಜನ ವಿದ್ಯಾರ್ಥಿಗಳಿಗೆ ಈ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷೆ ಕೂತುಕೊಳ್ಳುವಂಥ ವಿಶೇಷ ವ್ಯವಸ್ಥೆಯನ್ನು ಮಾಡಬೇಕು. ಒಂದು ವರ್ಷದ ಜೀವನ ಹಾಳಾಗುವುದನ್ನು ತಪ್ಪಿಸಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳತ್ತೇನೆ.

ಶ್ರೀ ಸಿ. ಬೈರೇಗೌಡ : ಈ ಘಟನೆ ನಡೆದಿರತಕ್ಕದ್ದು ನಿಜವೇ ಆಗಿದ್ದರೆ, ಇದು ಅಕ್ಷಮ್ಯ ಅಪರಾಧ ಎಂದು ಸರ್ಕಾರದ ಭಾವನೆ. ಸಂಬಂಧಪಟ್ಟ ಮಾನ್ಯ